ಆದಷ್ಟು ಬೇಗ ತುಂಬತಕ್ಕಂಥ ಕೆಲಸ ಮಾಡುತ್ತೇನೆ. ಆಮೇಲೆ ಈ ಪ್ಯಾರಾ ಮೆಡಿಕಲ್ (ಸಿ) ಗುಂಪಿನ ಹುದ್ದೆಗಳು ಏನು ಇವೆ ಇದನ್ನು ನಾವು ನೇಮಕಾತಿ ಮಾಡಬೇಕಾಗುತ್ತದೆ. ಆ ನೇಮಕಾತಿಯ ಪ್ರಕ್ರಿಯೆಯ ನೋಟಿಫಿಕೇಶನ್ ಅನ್ನು ಒಂದು ವಾರದಲ್ಲಿ ಹೊರಡಿಸುತ್ತೇವೆ. ಆ ಪ್ರಕ್ರಿಯೆ ಆದಮೇಲೆ ಈ ಎಲ್ಲಾ ಹುದ್ದೆಗಳನ್ನು ನಾವು ತುಂಬುತ್ತೇವೆ.

ಆನೇಕಲ್ ಮತಕ್ಷೇತ್ರದ ಆರೋಗ್ಯ ಕೇಂದ್ರದಲ್ಲಿ ನೀರಿನ ಬವಣೆಯನ್ನು ನೀಗಿಸಲು ಕೈಗೊಂಡ ತುರ್ತು ಕ್ರಮಗಳು

246 (2020) ಶ್ರೀ ನಾರಾಯಣ ಸ್ವಾಮಿ ಎ. (ಆನೇಕಲ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆನೇಕಲ್ ಮತಕ್ಷೇತ್ರದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಕಳೆದ 6 ತಿಂಗಳಿನಿಂದ ನೀರಿನ ಸಮಸ್ಯೆ ಉಲ್ಬಣಿಸಿದ್ದು ದಿನನಿತ್ಯದ ಅವಶ್ಯಕತೆಗಳಿಗೆ ನೀರಿಲ್ಲದ ಪರಿಸ್ಥಿತಿಯುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ನೀರಿನ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು;

ಇ) ನೀರಿನ ಸಮಸ್ಯೆಯ ಶಾಶ್ವತ ಪರಿಹಾರಕ್ಕೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು;

ಈ) ಆರೋಗ್ಯ ಕೇಂದ್ರದ ಸ್ವಚ್ಛತಾ ಕೆಲಸವನ್ನು ವಾರ್ಷಿಕ ಗುತ್ತಿಗೆಗೆ ನೀಡಿದ್ದು, ಗುತ್ತಿಗೆದಾರು ಸರಿಯಾಗಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಗುತ್ತಿಗೆದಾರರ ವಿರುದ್ಧ ಸರ್ಕಾರ:ಇಲಾಖೆಯು ಕೈಗೊಳ್ಳಲಿರುವ ಕಾರ್ಯಕ್ರಮವೇನು?

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಟ್ಯಾಂಕರ್‌ನಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಇ) ಒಂದು ಕೊಳವೆ ಬಾವಿ ಮಂಜೂರು ಮಾಡಲು ಜಿಲ್ಲಾಧಿಕಾರಿಯವರನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ವಿನಂತಿಸಿರುತ್ತಾರೆ.

ಈ) ಬಂದಿರುವುದಿಲ್ಲ. ಕಾರಣ ಆರೋಗ್ಯ ಕೇಂದ್ರದ ಸ್ವಚ್ಛತಾ ಕೆಲಸಗಳನ್ನು ವಾರ್ಷಿಕ ಗುತ್ತಿಗೆದಾರರು ಸರಿಯಾಗಿ ತೃಪ್ತಿಕರವಾಗಿ ನಿರ್ವಹಿಸುತ್ತಿದ್ದಾರೆ.

ಶ್ರೀ ಎ. ನಾರಾಯಣಸ್ವಾಮಿ :- ಮಾನ್ಯ ಅಧ್ಯಕ್ಷರೇ, ಆನೇಕಲ್‌ನಲ್ಲಿ 50 ಹಾಸಿಗೆಗಳ ಆಸ್ಪತ್ರೆ 200 ಲಕ್ಷ ರೂ ವೆಚ್ಚದಲ್ಲಿ ನಿರ್ಮಾಣ ಮಾಡಿದ್ದಾರೆ. ಆ ಆಸ್ಪತ್ರೆಯಲ್ಲಿ ನೀರಿನ ಅವ್ಯವಸ್ಥೆ ಇದೆ. ಬಹುತೇಕ ಹೆಣ್ಣುಮಕ್ಕಳು ಹೆರಿಗೆಗೆ ಹೋದರೆ, ನೀವು 4 ಬಿಂದಿಗೆ ನೀರು ತೆಗೆದುಕೊಂಡು ಬಂದರೆ ಡೆಲಿವರಿ ಮಾಡುತ್ತೇವೆ, ಇಲ್ಲದೇ ಹೋದರೆ ನರ್ಸಿಂಗ್ ಹೋಮ್‌ಗೆ ಹೋಗಿ ಎಂದು ಹೇಳುವ ಪರಿಸ್ಥಿತಿ ಆನೇಕಲ್ ಆಸ್ಪತ್ರೆಯಲ್ಲಿದೆ. ಇಲ್ಲಿರುವ ಒಂದು ಸಮಸ್ಯೆ ಏನೆಂದರೆ, ಆಸ್ಪತ್ರೆಯ ಆವರಣದಲ್ಲಿ ಒಂದು ಓವರ್-ಹೆಡ್-ಟ್ಯಾಂಕ್ ಇತ್ತು. ಇದನ್ನು ಕರ್ನಾಟಕ ಹೆಲ್ತ್ ಸಿಸ್ಟಂನವರು, ಇದರಿಂದ ನಮಗೆ ತೊಂದರೆಯಾಗುತ್ತಿದೆ ಇದನ್ನು ತೆಗೆದುಹಾಕುವುದಕ್ಕೆ ಪರ್ಮಿಷನ್ ಕೊಡಿ ಎಂದು ಟಿ.ಎಂ.ಸಿ. ಯವರನ್ನು ಕೇಳಿದ್ದರು. ಟಿ.ಎಂ.ಸಿ.ಯವರು ಪರ್ಮಿಷನ್ ಕೊಟ್ಟು ಅದನ್ನು ಒಡೆದು ಹಾಕಿದಮೇಲೆ, ಕರ್ನಾಟಕ ಹೆಲ್ತ್ ಸಿಸ್ಟಂನವರು ಆಸ್ಪತ್ರೆಯ ಕಡೆ ಗಮನವನ್ನೇ ಕೊಡಲಿಲ್ಲ. ಈ ಒಂದು ಪರಿಸ್ಥಿತಿ ಆನೇಕಲ್ ನಗರದ ಆಸ್ಪತ್ರೆಯಲ್ಲಿದೆ. ನೀವು ಎಷ್ಟು

ದಿನಗಳಲ್ಲಿ ನೀರಿನ ವ್ಯವಸ್ಥೆ ಮಾಡುತ್ತೀರಿ? ಹೆಣ್ಣುಮಕ್ಕಳು ಆ ಆಸ್ಪತ್ರೆಗೆ ಡೆಲಿವರಿಗೆ ಹೋಗಬೇಕೇ ಅಥವಾ ಬೇಡವೇ? ಇದರ ಜೊತೆಗೆ ಕರ್ನಾಟಕ ಹೆಲ್ತ್ ಸಿಸ್ಟಂನವರು ವರ್ಲ್ಡ್ ಬ್ಯಾಂಕಿನಿಂದ ಸಾಲ ಪಡೆಯುವಾಗ ಕಂಡೀಷನ್ಸ್ ಹಾಕಿದ್ದರು. ಎಲ್ಲ ಡಾಕ್ಟರುಗಳನ್ನು, ಸರ್ಜನ್ಸ್‌ನ್ನು ಅಲ್ಲಿ ಅಪಾಯಿಂಟ್ ಮಾಡಬೇಕೆಂದು ಹೇಳಿದ್ದರು. ಅಲ್ಲಿ ಆಪರೇಷನ್ ಥಿಯೇಟರ್ ಇದೆ. ಒಬ್ಬರೇ ಒಬ್ಬರು ಸರ್ಜನ್ ಕೂಡ ಇಲ್ಲ. ಕೇವಲ ಎರಡೂವರೆ ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿದ್ದಾರೆ. 50-60 ಜನ ರೋಗಿಗಳು ಹೋಗುವುದಕ್ಕೆ ಇಷ್ಟು ದುಡ್ಡು ಖರ್ಚು ಮಾಡುವ ಅವಶ್ಯಕತೆ ಇತ್ತೇ? ಸಮಗ್ರವಾಗಿ ಬದಲಾವಣೆ ಮಾಡುವುದಕ್ಕೋಸ್ಕರ, ಈ ಎರಡು ಕೋಟಿ ರೂಪಾಯಿಗಳು ಸದುಪಯೋಗವಾಗುವುದಕ್ಕೆ, ಸಾರ್ವಜನಿಕರಿಗೆ ಉಪಯೋಗವಾಗುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದರ ಬಗ್ಗೆ ಉತ್ತರ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಕೇಳಿರತಕ್ಕಂಥ ಪ್ರಶ್ನೆ ನೀರಿನ ತೊಂದರೆ ಇರತಕ್ಕಂಥಾದ್ದು; ಈ ನೀರಿನ ತೊಂದರೆಯನ್ನು ನಿಭಾಯಿಸುವುದಕ್ಕೆ ನಾವು ಅಗತ್ಯ ಕ್ರಮವನ್ನು ಖಂಡಿತವಾಗಿಯೂ ಕೈಗೊಳ್ಳುತ್ತೇವೆ. ಮಾನ್ಯ ಸದಸ್ಯರು ಪ್ರಯತ್ನಪಟ್ಟಿದ್ದರೆ, ಒಂದು ಕೊಳವೆ ಬಾವಿಯನ್ನು ಸುಲಭವಾಗಿ ಹಾಕಿಸಬಹುದಾಗಿತ್ತು. ಅದನ್ನು ಏಕೆ ಮಾಡಲಿಲ್ಲವೋ ನನಗಂತೂ ಗೊತ್ತಿಲ್ಲ. ಆದರೂ ಚಿಂತೆಯಿಲ್ಲ, ನಾನು ನಿನ್ನೆ ಫೋನ್ ಮಾಡಿ ಹೇಳಿದ್ದೇನೆ. ಕೂಡಲೇ ಕೊಳವೆ ಬಾವಿಯನ್ನು ಹಾಕಿ, ಆಸ್ಪತ್ರೆಗೆ ನೀರು ಕೊಟ್ಟು, ಈ ಕೊರತೆಯನ್ನು ಖಂಡಿತವಾಗಿಯೂ ಭರಿಸುತ್ತೇನೆ. ಅದು ವಿಶ್ವಬ್ಯಾಂಕ್ ಸಾಲದಿಂದ ಕಟ್ಟಿರತಕ್ಕ ಆಸ್ಪತ್ರೆ, ವೈದ್ಯರ ಹುದ್ದೆಗಳನ್ನು ತುಂಬತಕ್ಕ ವಿಚಾರದಲ್ಲಿ ನಿಮಗೆಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿಯಿಂದ ನಾವು ಮಾಡಬೇಕು. ಏಕೆಂದರೆ, ಆಸ್ಪತ್ರೆ ಕಟ್ಟಿ, ಅಲ್ಲಿ ವೈದ್ಯರು ಇಲ್ಲ, ಮತ್ತೊಂದು ಸಿಬ್ಬಂದಿ ಇಲ್ಲವೆಂದರೆ, ಅದು ಯಾರಿಗೂ ಗೌರವ ತರತಕ್ಕಂಥಾದ್ದು ಅಲ್ಲ. ಆ ಕೆಲಸವನ್ನು ಖಂಡಿತವಾಗಿಯೂ ನಾವು ಮಾಡುತ್ತೇವೆ.

ಶ್ರೀ ಎ. ನಾರಾಯಣಸ್ವಾಮಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬಹಳ ಸೂಕ್ತವಾಗಿ ಉತ್ತರವನ್ನು ಕೊಟ್ಟಿದ್ದಾರೆ. ತಮಗೆಲ್ಲಾ ಗೊತ್ತಿರಬಹುದು, ಇತ್ತೀಚೆಗೆ ರಾಜ್ಯದಲ್ಲಿ ಬೋರ್‌ವೆಲ್ ಹಾಕತಕ್ಕ ಕಂಟ್ರಾಕ್ಟರುಗಳ ವಿಚಾರದಲ್ಲಿ ನಮ್ಮೂರಿನಲ್ಲಿ ಜಡ್.ಪಿ. ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದ್ದೇನೆ ಮತ್ತು ಜಡ್.ಪಿ. ಇಂಜಿನಿಯರುಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಕಂಟ್ರಾಕ್ಟರುಗಳು ಫೋನ್ ಮಾಡಿದರೆ, ನಿಮ್ಮ ಜಿಲ್ಲಾ ಅಧಿಕಾರಿಗಳು, ಜಡ್.ಪಿ. ಇಂಜಿನಿಯರುಗಳು ಸೆಲ್ ಫೋನನ್ನು ಕಟ್ ಮಾಡುತ್ತಾರೆ. ಈ ಸರ್ಕಾರ ಹಣ ಕೊಡುವುದಿಲ್ಲ, ನಾನೇಕೆ ಬಂದು ಬೋರ್‌ವೆಲ್ ಹಾಕಬೇಕು ಎಂದು ಹೇಳುತ್ತಾರೆ. ಆ ಪರಿಸ್ಥಿತಿ ನಿರ್ಮಾಣವಾಗಿದೆ. ತಾವು ವೈಯಕ್ತಿಕವಾಗಿ ಗಮನಕೊಟ್ಟು, ದಯವಿಟ್ಟು ಆದ್ಯತೆ ಮೇಲೆ ನೀರನ್ನು ಆ ಆಸ್ಪತ್ರೆಗೆ ಕೂಡದೇ ಹೋದರೆ ಬಹುಶಃ ಹಣ ಸದುಪಯೋಗವಾಗುವುದಿಲ್ಲವೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಹೋದಸಾರಿ ಪ್ರತಿಯೊಬ್ಬ ಶಾಸಕರಿಗೂ 24 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆದರಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ 4 ಬೋರ್‌ವೆಲ್ ಹಾಕಿಸಬಹುದು. ತಾಲ್ಲೂಕು ಪಂಚಾಯಿತಿಯಿಂದ 25 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ, ಬೋರ್‌ವೆಲ್ ಹಾಕಿಸಬಹುದು. ಪುರಸಭೆಯ ವತಿಯಿಂದ ಒಂದು

ಬೋರ್‌ವೆಲ್ ಹಾಕಬಹುದು. ಸೋರ್ಸಸ್ ಇದೆ, ಎಂ.ಪಿ. ಗ್ರಾಂಟ್ ಇಲ್ಲವೇ? ಇದೆ; ಆಯಿತು, ಇವುಗಳನ್ನು ಬಿಟ್ಟುಬಿಡೋಣ. ಅಲ್ಲಿ ಬೋರ್ ಹಾಕಿಸಿಕೊಡುವ ಕೆಲಸ ಇದೆ, ಅದನ್ನು ಹಾಕಿಕೊಡೋಣ.

ಸುಳ್ಯ ಸಮುದಾಯ ಆಸ್ಪತ್ರೆಯ ಅಭಿವೃದ್ಧಿಗೆ ಒದಗಿಸಲಾದ ಅನುದಾನ ಹಾಗೂ ಕಾಮಗಾರಿಗೆ ಆಗಿರುವ ವೆಚ್ಚ

247 (2050) ಶ್ರೀ ಅಂಗಾರ ಎಸ್. (ಸುಳ್ಯ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಳ್ಯ ಸಮುದಾಯ ಆಸ್ಪತ್ರೆಗೆ (ಕರ್ನಾಟಕ ಹೆಲ್ತ್ ಡೆವಲಪ್‌ಮೆಂಟ್) ಕರ್ನಾಟಕ ಆರೋಗ್ಯ ಅಭಿವೃದ್ಧಿ ಸ್ಕೀಮ್ ಯೋಜನೆಯಡಿಯಲ್ಲಿ ಆಸ್ಪತ್ರೆಯ ಅಭಿವೃದ್ಧಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ; (ಯಾವ ಯಾವ ಯೋಜನೆಗೆ ಎಷ್ಟು ಖರ್ಚು ಮಾಡಲಾಗಿದೆ ಎಂಬ ವಿವರ ನೀಡುವುದು);

ಆ) ಇನ್ನು ಕಾಮಗಾರಿಗಳು ಪೂರ್ತಿಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಎಷ್ಟು ಸಮಯದಲ್ಲಿ ಪೂರ್ತಿ ಮಾಡಲಾಗುವುದು?

ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸುಳ್ಯದ ಸಮುದಾಯ ಆಸ್ಪತ್ರೆಯನ್ನು ಹಾಲಿ 30 ಹಾಸಿಗೆಗಳಿಂದ 50 ಹಾಸಿಗೆಗಳ ತಾಲ್ಲೂಕು ಆಸ್ಪತ್ರೆಯಾಗಿ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಕೈಗೊಂಡಿದ್ದು ಒಟ್ಟು ರೂ. 106.71 ಲಕ್ಷಗಳ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ. ಕಾಮಗಾರಿಗೆ ಆಗಿರುವ ವೆಚ್ಚ ಕೆಳಕಂಡಂತೆ ಇದೆ.

	(ಲಕ್ಷಗಳಲ್ಲಿ)
1. ಆಸ್ಪತ್ರೆ ವಿಸ್ತರಣೆ ಮತ್ತು ನವೀಕರಣ ಕಾಮಗಾರಿ	- ರೂ. 91.77
2. ಗ್ಲೇಜ್ ಟೈಲ್ಸ್ ಒದಗಿಸಿರುವುದು	- ರೂ. 11.50
3. ಕಸವಿಲೇವಾರಿ ಗುಂಡಿಗಳ ನಿರ್ಮಾಣ	- ರೂ. 0.81
4. ಗುಣಮಟ್ಟ ಸಂಸ್ಥೆಗೆ ಪಾವತಿಸಲಾದ ಮೊತ್ತ ಹಾಗೂ ಇತರೆ	- ರೂ. 1.20
5. ವಿದ್ಯುತ್ ಸರಬರಾಜಿಗಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಪಾವತಿಸಲಾದ ಮೊತ್ತ	- ರೂ. 1.43

ಆ) ಯೋಜನೆಯಡಿ ತೆಗೆದುಕೊಂಡ ಕಾಮಗಾರಿಗಳನ್ನು 31.10.2000 ರ ದೊಳಗೆ ಪೂರ್ಣಗೊಳಿಸಲಾಗಿದೆ. ಇತ್ತೀಚೆಗೆ ಆಸ್ಪತ್ರೆಯ ಹಳೆಯ ಕಟ್ಟಡದ ವಿದ್ಯುತ್ ವೈಯರಿಂಗ್‌ನಲ್ಲಿಯ ದೋಷ ಮತ್ತು ಮಂಗಳೂರು ಹಂಚಿನ ಛಾವಣಿ ಸೋರುವಿಕೆಯ ಬಗ್ಗೆ ವರದಿ ಬಂದಿದ್ದು, ಇವುಗಳನ್ನು ಸರಿಪಡಿಸಲು ರೂ. 8.00 ಲಕ್ಷಗಳ ಅಂದಾಜು ತಯಾರಿಸಲಾಗಿದೆ. ನಿರ್ವಹಣಾ ಅನುದಾನದಿಂದ ಸರಿಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಸ್. ಅಂಗಾರ :- ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಸುಳ್ಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ಮತ್ತು ಅದರ ಅಭಿವೃದ್ಧಿಗಾಗಿ ಯಾವ ಯೋಜನೆಯಡಿ ಅನುದಾನವನ್ನು ಒದಗಿಸಿಕೊಡಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಸಂಬಂಧಪಟ್ಟ ಹಾಗೆ ಕರ್ನಾಟಕ ಆರೋಗ್ಯ ಅಭಿವೃದ್ಧಿ ಸ್ಕೀಮಿನ ಅಡಿಯಲ್ಲಿ ಅನುದಾನವನ್ನು ಒದಗಿಸಿಕೊಡಲಾಗಿದೆ ಎಂಬ